ಕರ್ನಾಟಕ ವಿಧಾನಸಭೆ

ಮಂಗಳವಾರ 12ನೇ ಜನವರಿ 1993 ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11–10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ಬೆಂಗಳೂರು–ಶಿವಮೊಗ್ಗ ಬ್ರಾಡ್‌ಗೇಜ್ ಲೈನಿನ ಕೆಲಸದ ಪ್ರಾರಂಭದಿಂದುಂಟಾದ ತೊಂದರೆಗೆ ಪರ್ಯಾಯ ವ್ಯವಸ್ಥೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಬೆಂಗಳೂರಿಗೆ ಬ್ರಾಡ್‌ಗೇಜ್ ಮಾಡಬೇಕು ಎಂದು ಈಗಾಗಲೇ ತೀರ್ಮಾನವಾಗಿದೆ. ಈ ತಿಂಗಳ ಕೊನೆಯಲ್ಲಿ ಇದರ ಕೆಲಸ ಪ್ರಾರಂಭವಾಗುತ್ತದೆ. ಈ ಕೆಲಸ ಪ್ರಾರಂಭವಾದರೆ ಇದು ಮುಗಿಯುವುದಕ್ಕೆ ಕನಿಷ್ಠ 2–3 ವರ್ಷಗಳು ಬೇಕಾಗುತ್ತದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸುತ್ತಿದ್ದಾರೆ. ಈಗ ಶಿವಮೊಗ್ಗ ಬೆಂಗಳೂರಿಗೆ ಬ್ರಾಡ್‌ಗೇಜ್ ಕೆಲಸ ಪ್ರಾರಂಭವಾದರೆ ನಮ್ಮ ರಾಜ್ಯದ ನಾಲ್ಕು ಐದು ಜಿಲ್ಲೆಗಳ ಪ್ರಯಾಣಿಕರಿಗೆ ತೊಂದರೆ ಆಗುತ್ತದೆ. ತುಮಕೂರು, ಹಾಸನ, ಚಿಕ್ಕಮಗಳೂರು ಶಿವಮೊಗ್ಗ ಈ ಎಲ್ಲಾ ಜಿಲ್ಲೆಯ ಪ್ರಯಾಣಿಕರಿಗೆ ತೊಂದರೆ ಆಗುತ್ತಿದೆ. ಹಿಂದಿನ ಬಸ್ಸಿನ ವ್ಯವಸ್ಥೆಗೂ ಈಗಿನ ಟ್ರೈನಿನ ವ್ಯವಸ್ಥೆಗೂ ಹೋಲಿಸಿದರೆ ಟ್ರೇನ್‌ಗಳು ಇದ್ದರೂ ಸಹ ಬಸ್ಸಿಗೆ ಸಿಕ್ಕಾಪಟ್ಟೆ ರಷ್ ಇದೆ. ಇಂತಹ ಸಂದರ್ಭದಲ್ಲಿ ಈ ಟ್ರೇನ್ ನಿಲ್ಲಿಸಿಬಿಟ್ಟರೆ ಏನು ಗತಿ ಎನ್ನುವ ಪ್ರಶ್ನೆ ಬರುತ್ತದೆ. ಅದಕ್ಕೋಸ್ಕರ ಸರ್ಕಾರ ಈ ದಿಕ್ಕಿನಲ್ಲಿ ಬದಲಿ ವ್ಯವಸ್ಥೆ ಏನಾದರೂ ಮಾಡುತ್ತದೆಯೇ ಎಂದು ಸರ್ಕಾರದ ಗಮನಕ್ಕೆ ತರುತ್ತೇನೆ; ಶಿವಮೊಗ್ಗ ಬೆಂಗಳೂರಿಗೆ ಕನಿಷ್ಠ 20–25 ಬಸ್ಸುಗಳು ಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಾರೆ. ಇದಕ್ಕೆ ಸರ್ಕಾರ ಏನಾದರೂ ಹೇಳಿಕೆ ಕೊಡುತ್ತದೆಯೇ? ಏಕೆಂದರೆ ಎಲ್ಲಾ ಜಿಲ್ಲೆಗಳಿಗೂ ತೊಂದರೆ ಆಗುತ್ತಾ ಇದೆ. ದಯವಿಟ್ಟು ಸರ್ಕಾರದ ಕಡೆಯಿಂದ ಕನಿಷ್ಠ ಒಂದು 10 ಆದರೂ ಸೂಪರ್ ಡಿಲಕ್ಸ್ ಬಸ್‌ಗಳು ಬೇಕಾಗುತ್ತದೆ ಮತ್ತು 10–15 ಬೇರೆ ಆರ್ಡಿನರಿ ಬಸ್‌ಗಳು ಬೇಕಾಗುತ್ತವೆ. ಈ ದಿಕ್ಕಿನಲ್ಲಿ ಸರ್ಕಾರ ಹೇಳಿಕೆ ಕೊಡುತ್ತದೆಯೇ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಇದನ್ನು ಇಡೀ 4–5 ಜಿಲ್ಲೆಯ ಜನತೆಯ ಪರವಾಗಿ ಕೇಳುತ್ತಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳು):– ನಾನು ಸಾರಿಗೆ ಮಂತ್ರಿಗಳ ಗಮನಕ್ಕೆ ತಂದು ಅವರಿಂದ ತಮಗೆ ತಿಳಿಸುತ್ತೇನೆ.

2) ಮಲೆನಾಡು ಅಭಿವೃದ್ಧಿ ಮಂಡಳಿಯ ಕಾರ್ಯಾರಂಭ

ಶ್ರೀ ಬಿ.ಎಸ್. ಯಡಿಯೂರಪ್ಪ:– ತಮಗೆ ಗೊತ್ತಿರುವ ಹಾಗೆ ಹಿಂದಿನ ಸರ್ಕಾರ ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡುತ್ತೇವೆ ಎಂದು ಘೋಷಣೆ ಮಾಡಿದರು. ಅದು ರಚನೆಯೂ ಆಯಿತು. ಶಿವಮೊಗ್ಗ ಜಿಲ್ಲಾಪರಿಷತ್ತಿನ ಒಬ್ಬ ಕಾರ್ಯದರ್ಶಿಗಳೂ ಬಂದರು. ಮೂರು ತಿಂಗಳು ಸಂಬಳ ಕೊಟ್ಟುಕೊಂಡು ಅಲ್ಲಿ ಅವರು ಇದ್ದಾರೆ. ಆದರೆ ಇದುವರೆಗೂ ಈ ಅಭಿವೃದ್ಧಿ ಮಂಡಲಿಗೆ ಅಧ್ಯಕ್ಷರವರನ್ನು ನೇಮಕ ಮಾಡದ ಪರಿಣಾಮ ಏನು ಆ ಇಡೀ ಮಲೆನಾಡು ಅಭಿವೃದ್ಧಿಗೋಸ್ಕರ ಎಸ್ಟಿಮೇಟ್ ಪ್ಲಾನ್ ಮಾಡಿದ್ದರು ಅಲ್ಲಿ ಈ ಕೆಲಸ ಆಗಿಲ್ಲ. ಎಲ್ಲೂ ಏನೂ ಕೆಲಸ ಆಗದೆ ಇದು ಗೊಂದಲದಲ್ಲಿ ಇದೆ. ಅದಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿ, ಈ ವರ್ಷದಿಂದಲೇ ಅದಕ್ಕೆ ಎಷ್ಟು ಹಣ ಬಿಡುಗಡೆ ಮಾಡುತ್ತೀರಿ? ಕೆಲಸ ಏನಾದರೂ ಪ್ರಾರಂಭ ಮಾಡುತ್ತೀರಾ? ಅಧ್ಯಕ್ಷರನ್ನು ಯಾರನ್ನು ಮಾಡುತ್ತಿದ್ದೀರಿ? ತಾವು ಈ ದಿನ ನಮಗೆ ಅದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು ಎಂದು ವಿನಂತಿ ಮಾಡುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಇದು ಮಲೆನಾಡು ಅಭಿವೃದ್ಧಿ ಮಂಡಲಿ ಅಧ್ಯಕ್ಷರ ನೇಮಕದ ಬಗ್ಗೆ ಸಧ್ಯದಲ್ಲಿಯೇ ಸರ್ಕಾರ ಆಜ್ಞೆ ಹೊರಡುವುದರಲ್ಲಿ ಇದೆ. ಈಗ ಶಾಸನಸಭೆಯ ಕಾರ್ಯಕಲಾಪಗಳು ನಡೆಯುತ್ತಾ ಇರುವುದರಿಂದ ಅಲ್ಲಿ ಮೀಟಿಂಗ್ ಮಾಡುವುದಕ್ಕೆ ಆಗುವುದಿಲ್ಲ. ನಿಯಮಗಳ ಪ್ರಕಾರ ಬೆಂಗಳೂರಿನಲ್ಲಿ ಮೀಟಿಂಗ್ ಮಾಡುವುದಕ್ಕೆ ಆಗುವುದಿಲ್ಲ. ಮಲೆನಾಡು ಪ್ರದೇಶದಲ್ಲೇ ಎಲ್ಲಾದರೂ ಮೀಟಿಂಗ್ ಆಗಬೇಕು. ಆದುದರಿಂದ ಇದು ಆದಮೇಲೆ ಈ ತಿಂಗಳ ಕೊನೆಯೊಳಗಾಗಿ ಶಿವಮೊಗ್ಗದಲ್ಲಿ ಎಲ್ಲಾ ಸದಸ್ಯರು ಅಂದರೆ ಶಾಸನಸಭೆ ಸದಸ್ಯರು, ಲೋಕಸಭೆ ಸದಸ್ಯರು ಎಲ್ಲರೂ ಸೇರಿ ಕರೆಯಬೇಕು ಎನ್ನುವ ಯೋಚನೆ ಸರ್ಕಾರಕ್ಕೆ ಇದೆ. ಸಧ್ಯದಲ್ಲಿಯೇ ಈ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಹಣ ಎಷ್ಟು ಬಿಡುಗಡೆ ಮಾಡುತ್ತೀರಿ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಅದು ಇನ್ನೂ ನಿಗಧಿ ಆಗಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಅಧ್ಯಕ್ಷರೆ, ಮಲೆನಾಡು ಅಭಿವೃದ್ಧಿ ಮಂಡಳಿ ಬಗ್ಗೆ ಬಿಲ್ ಪಾಸ್ ಆಯಿತು, ಎಲ್ಲಾ ಆಯಿತು. ಆದರ ಬಗ್ಗೆ ನಾವು ಬಹಳ ಹೋಪ್ಸ್ ಇಟ್ಟಿದ್ದೆವು. ಎಂಟು ತಿಂಗಳ ಹಿಂದೆ ಎಲ್ಲಾ ಶಾಸಕರಿಂದ ಜಿಲ್ಲಾಪರಿಷತ್ತಿನಿಂದ ಪ್ರಪೋಸಲ್ಸ್ ತೆಗೆದುಕೊಂಡಿದ್ದಾರೆ; ಈಗ ಜನವರಿ ತಿಂಗಳು ಮುಗಿಯುವುದಕ್ಕೆ ಬಂದಿದೆ. ಮಲೆನಾಡು ಅಭಿವೃದ್ಧಿ ಮಂಡಳಿಗೆ ಹಣವೂ ರಿಲೀಸ್ ಆಗಿಲ್ಲ ಮತ್ತು ಯಾವ ಕೆಲಸವನ್ನೂ ತೆಗೆದುಕೊಂಡಿಲ್ಲ. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಹೇಳಿದ್ದಾರೆ ಮಂಡಳಿಗೆ ಛೇರ್‌ಮನ್ ನೇಮಕ ಆಗಿಲ್ಲ ಎಂದು, ಆದರೆ ಅದಕ್ಕಿಂತ ಮುಖ್ಯವಾಗಿ, ಯಾವ ಉದ್ದೇಶಕ್ಕಾಗಿ ಮಂಡಳಿ ಆಯಿತು, ಆ ಉದ್ದೇಶಕ್ಕಾಗಿ ಇವತ್ತು ಅಭಿವೃದ್ಧಿ ಕೆಲಸಗಳು ಆಗಬೇಕಾಗಿದೆ. ಹಣ ಬಿಡುಗಡೆ ಆಗಬೇಕಾಗಿದೆ. ಇದರ ಬಗ್ಗೆ ಸರ್ಕಾರ ಮುಖ್ಯವಾಗಿ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಹೇಳಬೇಕು.

ಅಧ್ಯಕ್ಷರು:- ಇದಕ್ಕೆಲ್ಲಾ ಉತ್ತರ ಮುಂದಿನ ಬಜೆಟ್ ಅಧಿವೇಶನದಲ್ಲಿ, ಇದು ಬಂದಾಗ ಗೊತ್ತಾಗುತ್ತದೆ. ಅದು ಇನ್ನೂ ಒಂದು ತಿಂಗಳು ಇದೆ.

ಶ್ರೀ ಆರ್.ವಿ. ದೇಶಪಾಂಡೆ:- ಈ ವರ್ಷದ ಹಣದ ಮಾತು ಏನು? ಇದರ ಬಗ್ಗೆ ಅವರು ಹೇಳಲಿ.

ಅಧ್ಯಕ್ಷರು:- ಈ ವರ್ಷ ಪ್ರಾಕ್ಟಿಕಲ್ ಆಗಿ ಮುಗಿದು ಹೋಗಿದೆ. ಥಿಯಾರಿಟಿಕಲಿ ಮಾತ್ರ ಇನ್ನು ಎರಡು ತಿಂಗಳು ಉಳಿದಿದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮೂಲಭೂತವಾದ ಪ್ರಶ್ನೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದೇ ಸದನದಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಗೆ, ಗಡಿಪ್ರದೇಶ ಚಾಮರಾಜನಗರ ತಾಲ್ಲೂಕು ಸೇರಿಸಬೇಕೆಂದು ಧರಣಿ ಮಾಡಿದಾಗ ಹಿಂದಿನ ಮುಖ್ಯಮಂತ್ರಿಗಳು ಮತ್ತು ಈಗಿನ ಮುಖ್ಯಮಂತ್ರಿಗಳು ಇಬ್ಬರೂ ಭರವಸೆ ಕೊಟ್ಟು ಚಾಮರಾಜನಗರ ತಾಲ್ಲೂಕನ್ನು ಸೇರಿಸುತ್ತೇವೆಂದು ಹೇಳಿ, ಒಂದು ನಿಯೋಗವನ್ನು ಚಾಮರಾಜನಗರಕ್ಕೆ ಕಳುಹಿಸಿ ಅವರಿಂದ ವರದಿಯನ್ನು ತರಿಸಿಕೊಂಡು, ಈಗ ಆ ವರದಿಯು ಸಂಪುಟದ ಹತ್ತಿರ ಬಂದಿದೆ. ತಮ್ಮ ಮೂಲಕ ನಾನು ಒಂದೇ ಸಮನೆ ಒತ್ತಾಯ ಮಾಡುತ್ತಿದ್ದೇನೆ. ಗಡಿನಾಡು ಜನಕ್ಕೆ ಅನುಕೂಲವಾಗಲಿ ಎಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಅವರು ಏನು ಭರವಸೆ ಕೊಟ್ಟಿದ್ದರೋ ಅದನ್ನು ಮಾನ್ಯ ಸಚಿವರು ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಸಚಿವ ಸಂಪುಟದ ಹತ್ತಿರ ವರದಿ ಬಂದಿದೆ. ದಯಮಾಡಿ ಇದನ್ನು ಒಪ್ಪುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಜಿಲ್ಲಾ ಪರಿಷತ್ತಿನ ಇಂಜನೀಯರಗಳನ್ನು ಮತ್ತು ಯಾರನ್ನು ಕೇಳಿದರೂ ಕೂಡ ಅವರು ಅಭಿವೃದ್ಧಿ ಮಂಡಳಿಯವರ ಕಡೆ ತೋರಿಸುತ್ತಾರೆ. ಕನಿಷ್ಟ ನೂರು ಕೋಟಿ ರೂಪಾಯಿಗಳಾದರೂ ಬಿಡುಗಡೆ ಮಾಡಬೇಕಾಗುತ್ತದೆ. ಇಲ್ಲ ಎಂದರೆ, ಅದಕ್ಕೆ ಅರ್ಥವೇ ಇಲ್ಲ.

3) ಮೈಸೂರು ಡೈರಿ ಒಕ್ಕೂಟದಲ್ಲಿ ನಡೆಯಿತೆನ್ನಲಾದ ಅವ್ಯವಹಾರ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಮೈಸೂರು ಡೈರಿ ವಿಚಾರದಲ್ಲಿ ನಾವು ಮತ್ತು ವಾಟಾಳ್ ನಾಗರಾಜ್ ಅವರು ತಮ್ಮ ಅನುಮತಿ ಕೇಳಿದ್ದೇವೆ. ಸಾಕಷ್ಟು ದುರ್ವ್ಯವಹಾರಗಳು ನಡೆದಿವೆ. ಕಳೆದ ನವೆಂಬರ್ ಮತ್ತು ಡಿಸೆಂಬರ್ ಈ ಎರಡು ತಿಂಗಳಲ್ಲಿ 50-60 ಲಕ್ಷ ರೂಪಾಯಿಗಳ ಹಾನಿ ಈ ಸಂಸ್ಥೆಗೆ ಆಗಿದೆ. ಏನು ಮಿಲ್ಕ್ ಪ್ರಕ್ಯೂರ್‌ಮೆಂಟ್ ಆಗಿದೆ ಅದರ ಬೆಲೆಯನ್ನು ರೈತರಿಗೆ ಕೊಟ್ಟಿಲ್ಲ. ಅಷ್ಟೇ ಅಲ್ಲ ಹಣವನ್ನು ದುರುಪಯೋಗ ಮಾಡಿಕೊಂಡು ಮಾರುತಿ ಕಾರು ಇಂಥ ವಾಹನಗಳನ್ನು ಖರೀದಿ ಮಾಡಿದ್ದಾರೆ. ಹಾಗಾಗಿ ಇವತ್ತು ರೈತರು ಬಹಳ ಕಷ್ಟದಲ್ಲಿ ಇದ್ದಾರೆ ಮತ್ತು ಮ್ಯಾನೆಜ್‌ಮೆಂಟ್‌ನವರು ಉದ್ದೇಶಪೂರ್ವಕವಾಗಿ ಎಂಪ್ಲಾಯ್ಸ್‌ನಲ್ಲಿ ಡಿಫರೆನ್ಸಸ್ ತರಬೇಕು ಎಂದು ಮಾಡಿದ್ದಾರೆ. ಈಗಾಗಲೇ ಅಲ್ಲಿ ಮೂರು ಯೂನಿಯನ್‌ಗಳು ಕ್ರೀಯೇಟ್ ಆಗಿವೆ. ಅದರಲ್ಲಿ ಒಂದು ಪ್ರಕ್ಯೂರ್‌ಮೆಂಟ್ ಯೂನಿಯನ್‌ನಲ್ಲಿದ್ದ ಜನರಲ್ ಸೆಕ್ರೆಟರಿಯನ್ನು ಸಸ್ಪೆಂಡ್ ಮಾಡಿದ್ದಾರೆ. ನಾಲ್ಕು ಜನ ಸಿಬ್ಬಂದಿಯನ್ನು ವರ್ಗ ಮಾಡಿದ್ದಾರೆ. ಹಾಗೂ ನಮ್ಮ ಕಂದಾಯ ಸಚಿವರು ಅಲ್ಲಿಗೆ ಹೋಗಿದ್ದಾಗ ಅವರಿಗೆ ಒಂದು ಮನವಿಯನ್ನು ಕೊಟ್ಟಿದ್ದಾರೆ ಎಂದು ತಿಳಿದುಬಂದಿದೆ. ಅಲ್ಲಿ ಏನು ದುರ್ವ್ಯವಹಾರ ನಡೆದಿದೆ ಅದರ ಬಗ್ಗೆ ತನಿಖೆ ಸಹ ಮಾಡಬೇಕು, ಎಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಇದೇ ವಿಚಾರದಲ್ಲಿ ತಮ್ಮ ಗಮನ ಸೆಳೆಯಲು ಪ್ರಯತ್ನ ಪಡುತ್ತೇನೆ. ಮೂರು ವರ್ಷಗಳಿಂದ ಮೈಸೂರು ಡೈರಿ ಒಕ್ಕೂಟದ ಚುನಾವಣೆ ಆಗಿಲ್ಲ. ಇದೇ ರೀತಿಯಲ್ಲಿ ಚುನಾವಣೆಯನ್ನು ಮುಂದೂಡಿಕೊಂಡು ಹೋಗುತ್ತಿದ್ದಾರೆ. ಸರ್ಕಾರ ಇದರ ಬಗ್ಗೆ ತೀವ್ರವಾಗಿ ಕ್ರಮ ಕೈಗೊಳ್ಳಬೇಕು. ಮತ್ತು ಅಲ್ಲಿ ನಷ್ಟದಲ್ಲಿ ನಡೆಯುತ್ತಿರುವಂತಹ ಒಕ್ಕೂಟ ಇದ್ದರೂ, ಅಲ್ಲಿನ ಅಧಿಕಾರಿವರ್ಗದವರು ತಮ್ಮ ಸ್ವಂತ ಲಾಭಕ್ಕಾಗಿ ಹೊಸ ಹೊಸ ಮೊಟಾರು ವಾಹನಗಳನ್ನು ಪಡೆದು ಓಡಾಡುವಂತಹ ವ್ಯವಸ್ಥೆ ಮಾಡಿದ್ದಾರೆ. ಅಲ್ಲಿರತಕ್ಕ ಪ್ರಾಮಾಣಿಕವಾದ ಅಧಿಕಾರಿಗಳನ್ನು ಇದ್ದಕ್ಕಿದ್ದಂತೆ ವರ್ಗ ಮಾಡಿದ್ದಾರೆ. ಮಾರ್ಚ್-ಏಪ್ರಿಲ್ ಯಾವುದನ್ನು ನೋಡದೆ ಮಧ್ಯಂತರ ವರ್ಷದಲ್ಲಿ ಉದ್ದೇಶಪೂರ್ವಕವಾಗಿ ಕೆಲವರನ್ನು ವರ್ಗ ಮಾಡಿದ್ದಾರೆ. ಪ್ರತಿನಿತ್ಯ ಹಾಲು ಕೊಟ್ಟವರಿಗೆ ಹಣ ಕೊಡುತ್ತಿದ್ದರು, ಈಗ ಒಂದು ವಾರ ಅಲ್ಲ, ತಿಂಗಳಾನುಗಟ್ಟಲೆ ಆದರೂ ಹಣವನ್ನು ಕೊಡುತ್ತಿಲ್ಲ. ಚಾಮರಾಜನಗರ ತಾಲ್ಲೂಕು ಒಂದರಲ್ಲೇ ಇಡೀ ಮೈಸೂರು ಜಿಲ್ಲೆಯಲ್ಲಿ ಒಕ್ಕೂಟಕ್ಕೆ ಬರತಕ್ಕಂತಹ ಹೆಚ್ಚಿನ ಹಾಲು ಬರುತ್ತದೆ. ಅಲ್ಲಿಗೆ ಬರತಕ್ಕ ಹಾಲನ್ನು ಪರಿಶುದ್ಧವಾಗಿ ಇಟ್ಟುಕೊಳ್ಳದೆ, ಸರಿಯಾದ ವ್ಯವಸ್ಥಿತವಾದ ಶೀತಲೀಕರಣದ ವ್ಯವಸ್ಥೆ ಇಲ್ಲದೆ 27 ಸಾವಿರ ಲೀಟರ್ ಹಾಲನ್ನು ಬೀದಿಗೆ ಸುರಿದಿದ್ದಾರೆ. ಮತ್ತು ಅಲ್ಲಿ ಬೇಜವಬ್ದಾರಿಯಿಂದ ಆಡಳಿತ ನಡೆಯುತ್ತಿದೆ. ಸಮಗ್ರವಾಗಿ ಈ ಒಕ್ಕೂಟದ ಅವ್ಯವಹಾರದ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಈ ಬಗ್ಗೆ ವಜಾ ಮಾಡಿರುವಂಥ ಅಧಿಕಾರಿಗಳನ್ನು ಪುನಃ ನೇಮಕಾತಿ ಮಾಡಿಕೊಳ್ಳುವಂತೆ ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಒಬ್ಬ ಅಧಿಕಾರಿ ಮೇಲೂ ದೂರು ಇಲ್ಲ. ಉದ್ದೇಶಪೂರ್ವಕವಾಗಿ ವರ್ಗಾವಣೆ ಮಾಡಿದ್ದಾರೆ. ಅವ್ಯವಹಾರಗಳನ್ನು ಮಾಡಿದ್ದಾರೆ. ಇದು ಅವರಿಗೆ ಸಂಬಂಧ ಇಲ್ಲ. ಜನಗಳಿಗೆ ಗೊತ್ತಾಗಿದೆ; ಬಹಿರಂಗ ಮಾಡಿದ್ದಾರೆ. ಅಧಿಕಾರಿಗಳ ಮೇಲೆ ಹೊಣೆ ಹೊರಿಸಿ 24 ಗಂಟೆಗಳಲ್ಲಿ ವರ್ಗ ಮಾಡಿ, ಗೊಂದಲ ವಾತಾವರಣ ನಿರ್ಮಾಣ